**ಕರ್ನಾಟಕ ಸರ್ಕಾರ**
**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**
**ಸಿ.ಸಿ.ನಂ.884/2014**

**ಪಿ.ಡಬ್ಲ್ಯೂಃ 25**
**ಸಿ.ಡಬ್ಲ್ಯೂಃ 26**

**ಸಾಕ್ಷಿದಾರರ ಹೆಸರು** ಃ ಸುರೇಶ್
**ತಂದೆಯ ಹೆಸರು** ಃ ಮಾಣಿಕ್ಯಂ
**ವಯಸ್ಸು** ಃ 53 ವರ್ಷ
**ಉದ್ಯೋಗ** ಃ ಟೈಲರ್
**ವಾಸಸ್ಥಳ** ಃ ಬಾವಿಕೆರೆ

**ದಿನಾಂಕಃ 08-02-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ ಃ ಸ.ಸ.ಅ. ರವರಿಂದ**

ನ್ಯಾಯಾಲಯದ ಮುಂದಿರುವ ಆರೋಪಿಯು ಬಾವಿಕೆರೆಯ ಕಾವೇರಿ ಗ್ರಾಮೀಣ ಬ್ಯಾಂಕಿನ ಮ್ಯಾನೇಜರ್ ಆಗಿರುತ್ತಾರೆ. ಆ ಬ್ಯಾಂಕಿನಲ್ಲಿ ನನ್ನ ಖಾತೆ ಇರುತ್ತದೆ. ನಾನು ಸದರಿ ಬ್ಯಾಂಕಿಗೆ ಹೋಗಿ ಬರುತ್ತಿರುತ್ತೇನೆ. ಈ ಪ್ರಕರಣದ ಬಗ್ಗೆ ನನಗೇನು ಗೊತ್ತಿಲ್ಲ. ಸಾಕ್ಷಿ ನಿಪಿ-*27* ರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-*27*(ಬಿ) ಎಂದು ಗುರುತಿಸಲಾಯ್ತು.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಸ.ಸ.ಅ. ರವರಿಂದ**

ದಿಃ***18-10-2013*** ರದು ***1*** ಗಟೆ ಸಮಯುದಲ್ಲಿ ಲಕ್ಕವಳ್ಳಿ ಪೋಃ ಠಾಣೆಯಲ್ಲಿ ಚಿನ್ನಾಭರಣದ ಸಾಲದ ಅರ್ಜಿಯಲ್ಲಿ ಉಮೇಶ , ಪುಟ್ಟಸ್ವಾಮಿ, ಮಂಜೇಗೌಡ, ನಿಂಗಪ್ಪ, ಸುರೇಶ್ , ಕುಮಾರ ಹಾಗೂ ಕೇಶವಮೂರ್ತಿ ಎಂಬುವವರು ಸಹಿ ಹಾಕಿದ್ದು , ಸದರಿ ಸಹಿಗಳ ತಾಳೆಗೋಸ್ಕರ ಆ ***6*** ಜನರ ಕೋರಿಕೆ ಸಹಿಯನ್ನು ನನ್ನ ಸಮಕ್ಷಮ ಪಂಚನಾಮೆ ಮಾಡಿ ಪೋಲೀಸರು ಪಡೆದಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಆರೋಪಿ ಬ್ಯಾಂಕಿನ ಹಣವನ್ನು ದುರುಪಯೋಪಡಿಸಿಕೊಂಡಿದ್ದರ ಬಗ್ಗೆ ಕೇಸು ದಾಖಲಾಗಿದ್ದು, ಸದರಿ ಕೇಸಿನಲ್ಲಿ ತಮ್ಮ ಅರ್ಜಿಯಲ್ಲಿನ ಸಹಿಗಳನ್ನು ತಾಳೆಗೋಸ್ಕರ ನನ್ನ ಸಮಕ್ಷಮ ಪೋಲಿಸರು

ಪಡೆದಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಪೋಲೀಸರು ಹೇಳಿದ್ದಕ್ಕೆ ನಾನು ಸಹಿ ಮಾಡಿದ್ದೇನೆಂದು ನುಡಿಯುತ್ತಾರೆ.

***ಪಾಟೀ ಸವಾಲು : ಆರೋಪಿ ಪರ*** ಶ್ರೀ ಎಂ ಕೆ ಟಿ ***ವಕೀಲರಿಂದ.***

ಪೋಲೀಸರು ಹೇಳಿದ್ದಕ್ಕೆ ನಾನು ಸಹಿ ಮಾಡಿರುತ್ತೇನೆಂದರೆ ಸರಿ.

***ಮರುವಿಚಾರಣೆಃ*** ***ಇರುವುದಿಲ್ಲ.***

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)***

***ಓ. ಕೇ. ಸ. ಇ. ಎ. ಒ.***

Sd/-

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

***ಪ್ರ.ದ.ನ್ಯಾ.ದಂ.ರವರು,ತರೀಕೆರೆ.***